# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಜಕ್ಕಸಂದ್ರ ವಾರ್ಡ್ ಸಂಖ್ಯೆ-173 ದಿನಾಂಕ: 23-03-2021 ರಂದು**

**ಮಾರ್ಚ್-2021 ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173ರ ರವರ ಅಧ್ಯಕ್ಷತೆಯಲ್ಲಿ ಗ್ರಂಥಾಲಯ ಕಟ್ಟಡ, ಉದ್ಯಾನವನ ಹತ್ತಿರ, ಹೆಚ್.ಎಸ್.ಆರ್. 5ನೇ ಸೆಕ್ಟರ್, ಜಕ್ಕಸಂದ್ರ, (ಜಕ್ಕಸಂದ್ರ ವಾರ್ಡ್ ಕಛೇರಿ, ಬಿ.ಬಿ.ಎಂ.ಪಿ) ಬೆಂಗಳೂರು ದಿನಾಂಕ: 23.03.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀ ಪೊನ್ನಪ್ಪ
2. ಶ್ರೀ ಎಲ್.ವಿ. ಹೆನ್ರಿ
3. ಶ್ರೀಮತಿ ಪ್ರೇಮ ಮಂಜುನಾಥ್ ವಿ.ಎ
4. ಶ್ರೀಮತಿ ಪ್ರೇಮ ಕುಮಾರಿ .ಎನ್
5. ಶ್ರೀ ಸಾಜಿ ಜಾರ್ಜ್
6. ಶ್ರೀಮತಿ ಸರಸ್ವತಮ್ಮ
7. ಶ್ರೀಮತಿ ಕುಸುಮ

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-173 ಜಕ್ಕಸಂದ್ರ
2. ಶ್ರೀ ಕರಿಯಪ್ಪ, ತೆರಿಗೆ ನಿರೀಕ್ಷಕರು
3. ಶ್ರೀ ಎನ್. ಓಬಳೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ಎನ್.ಆರ್. ಬಾಬು, ಅರಣ್ಯ ಇಲಾಖೆ
5. ಶ್ರೀ ಎಂ.ಹೆಚ್. ಗಂಗರಾಜು, ಎ.ಎಸ್.ಐ.
6. ಶ್ರೀ ಎನ್. ದಿನೇಶ್, ಎ.ಎಸ್.ಐ. ಮಡಿವಾಳ ಸಂಚಾರ ಪೊಲೀಸ್ ಸ್ಟೇಷನ್
7. ಶ್ರೀ ಧರಣೇಶ್, ಮಡಿವಾಳ ಸಂಚಾರ ಪೊಲೀಸ್ ಸ್ಟೇಷನ್
8. ಶ್ರೀ ದಯಾನಂದ, ಮಡಿವಾಳ ಪೊಲೀಸ್ ಸ್ಟೇಷನ್
9. ಶ್ರೀ ಮಂಜುನಾಥ್, ಮಾರ್ಷಲ್

* * * * *

ಶ್ರೀ ಸಂಜೀವ್‌ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 173 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ನ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲು ತಿಳಿಸಿದರು.

13ನೇ ಮುಖ್ಯರಸ್ತೆಯ ಕೊನೆಯಲ್ಲಿ ಗ್ರೀನ್‌ವ್ಯೂವ್ ಆಸ್ಪತ್ರೆ ಹಿಂಭಾಗದಲ್ಲಿ ಅಳವಡಿಸಿರುವ ವಿದ್ಯುತ್ ಕಂಬಕ್ಕೆ ದೀಪವನ್ನು ಅಳವಡಿಸಲು ಹೆಚ್.ಎಸ್.ಆರ್. 5ನೇ ಹಂತದ ಕ್ಷೇಮಾಭಿವೃದ್ಧಿ ಸಂಘದವರು ಕೋರಿದರು. ಈ ಬಗ್ಗೆ ಕ್ರಮವಹಿಸಲು ಸಹಾಯಕ ಅಭಿಯಂತರರು (ವಿದ್ಯುತ್) ಬಿ.ಬಿ.ಎಂ.ಪಿ. ರವರಿಗೆ ದೂರವಾಣಿ ಮುಖಾಂತರ ಕೋರಲಾಗಿ ಸದರಿ ರವರು ಸ್ಪಂದಿಸಿದ್ದು, ಅಳವಡಿಸುವುದಾಗಿ ತಿಳಿಸಿರುತ್ತಾರೆ.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಎಲೆಕ್ಟ್ರಿಕಲ್ ವಿಭಾಗ, ಬಿ.ಬಿ.ಎಂ.ಪಿ



Scanned by CamScanner

ಹೆಚ್.ಎಸ್.ಆರ್. 5ನೇ ಹಂತದ ಬಡಾವಣೆಯಲ್ಲಿ ಫಾಗಿಂಗ್ ಅನ್ನು ಸಮರ್ಪಕವಾಗಿ ನಿರ್ವಹಿಸಲು ಶ್ರೀಮತಿ ಕುಸುಮ ರವರು ಸಭೆಯಲ್ಲಿ ಕೋರಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು
ಆರೋಗ್ಯ ಶಾಖೆ, ಬಿಬಿಎಂಪಿ ವಿಭಾಗ

ಶ್ರೀ ಮೊನ್ನಪ್ಪ ರವರು ಮಾತನಾಡಿ, 14ನೇ ಮುಖ್ಯರಸ್ತೆಯಲ್ಲಿರುವ ಕಟ್ಟಡದಲ್ಲಿ ಪ್ರತಿ ಶುಕ್ರವಾರ, ಶನಿವಾರಗಳಂದು ಪಾರ್ಟಿ ನೆಪದಲ್ಲಿ ಸೇರುವ ಜನರು ಶಬ್ಧ ಮಾಲಿನ್ಯದಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆ ಉಂಟುಮಾಡುತ್ತಿರುತ್ತಾರೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಕ್ರಮ: ಆರಕ್ಷಕ ನಿರೀಕ್ಷಕರು
ಹೆಚ್.ಎಸ್.ಆರ್. ಪೊಲೀಸ್ ಠಾಣೆ

ಫೀಡರ್ ಕೇಬಲ್ ಅಳವಡಿಸಲು ಬೆಸ್ಕಾಂ ವತಿಯಿಂದ ರಸ್ತೆಯಲ್ಲಿ ಅಗೆದಿರುವ ಗುಂಡಿಗಳನ್ನು ಮುಚ್ಚಲು ಮತ್ತು ಬೆಸ್ಕಾಂ ವತಿಯಿಂದ ರಸ್ತೆ ಅಗೆತದಿಂದ ಬಿದ್ದಿರುವ ತ್ಯಾಜ್ಯವನ್ನು ತೆರವುಗೊಳಿಸಲು ಸಭೆಯಲ್ಲಿ ಚರ್ಚಿಸಿ, ಅಂತಿಮವಾಗಿ ಮಾರ್ಚ್ 30 ರೊಳಗೆ ಗಡುವು ನೀಡಲಾಯಿತು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೆಸ್ಕಾಂ ಇಲಾಖೆ

13ನೇ ಮುಖ್ಯರಸ್ತೆಯ ಕೊನೆಯಲ್ಲಿ ಕಸವನ್ನು ಸುರಿಯುತ್ತಿದ್ದು, ಮಾರ್ಷಲ್‌ಗಳನ್ನು ಹೆಚ್ಚಿಸಿ, ಬ್ಲಾಕ್ ಸ್ಪಾಟ್ ತೆರವುಗೊಳಿಸಲು ಹೆಚ್.ಎಸ್.ಆರ್. 5ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರಾದ ಶ್ರೀಮತಿ ಕುಸುಮ ರವರು ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಸದಸ್ಯ ಕಾರ್ಯದರ್ಶಿ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

23/03/2021

(ಶ್ರೀ. ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ-173 ಜಕ್ಕಸಂದ್ರ

23-03-2021

(ಶ್ರೀ ಸಂಜೀವಕುಮಾರ್)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ-173 ಜಕ್ಕಸಂದ್ರ



Scanned by CamScanner



Scanned by CamScanner




Scanned by CamScanner